Regd NoB G 155 7-12-1969

SATYAVADI Daily, MYSORE 4 ☆ 53rd Year of Publication

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

(1) ನಿಜಲಿಂಗಪ್ಪನವರು ರಾಜೀನಾಮೆ ಕೊಡುವುದಿಲ್ಲ (2)

ಯುವಕ ಕಾಂಗ್ರೆಸಿಗರು

ನವದೆಹ— ಕಾಂಗ್ರೆಸ್ ಭವನದ ಎರಡನೇ ಅಂತಸ್ತಿನಲ್ಲಿ ಇಂದಿರಾ ಕಾಂಗ್ರೆಸ್‌ಗೆ ನಿಷ್ಠೆ ತೋರಿಸುವ ಯುವಕ ಕಾಂಗ್ರೆಸ್ಸಿನವರ ಕೊಠಡಿಗೆ, ನಿಜಲಿಂಗಪ್ಪ ಕಾಂಗ್ರೆಸಿನ ಇಬ್ಬರು ಯುವಕ ಕಾಂಗ್ರೆಸಿಗರು ನುಗ್ಗಿ ಕೆಲವು ಪದಾರ್ಥ ತೆಗೆದುಕೊಳ್ಳಲು ಹೊರಟಾಗ ಪೋಲೀಸರು ದಸ್ತಗಿರಿ ಮಾಡಿದರು ; ಮ್ಯಾಜಿಸ್ಟ್ರೇಟರು ರೂ. 1000 ಸ್ವಂತ ಮುಚ್ಚಳಿಕೆ ಮೇಲೆ ಬಿಡುಗಡೆ ಮಾಡಿದರು.

★

ಜೂಜಿನ ಕಟ್ಟೆ ಮೇಲೆ ಧಾಳಿ

ಮೈಸೂರು— ಲಷ್ಕರ್ ಮತ್ತು ನಂಡಿ ಮೊಹಲ್ಲಾದ ಎರಡು ಜೂಜಾಡುವ ಸ್ಥಳಗಳ ಮೇಲೆ ಪೋಲೀಸರು ನಡೆಸಿದ ಧಾಳಿಯಲ್ಲಿ 23 ಜನರು ಬಂಧಿಸಲ್ಪಟ್ಟರು, ಮತ್ತು ಜೂಜಿನ ಹಣ ರೂ 1100 ಮತ್ತು ಒಂದು ಜೊತೆ ಬೆಲ್ಜೀ ಕಾಲು ಬಳೆ, ಒಂದು ಮಹಿಳೆಯರ ಕೈಗಡಿಯಾರ, ಮೂರು ಬೈಸಿಕಲ್‌ಗಳು ವಶಪಡಿಸಿಕೊಳ್ಳಲಾಯ್ತು.

★

ಮುಖ್ಯ ಮಂತ್ರಿಗಳ ಭೂಮಿಗೇ ಬಂತು

ಪೂನಾ— ರಾಜ್ಯದಲ್ಲಿ ವಿವಿಧ ಸ್ವಾಜೆಕ್ಟುಗಳಿಂದ ಭೂಮಿ ಕಳೆದುಕೊಂಡ ರೈತರು ಮಹಾರಾಷ್ಟ್ರ ಮುಖ್ಯಮಂತ್ರಿ ಶ್ರೀ ನಾಯಿಕ್‌ರ ಸ್ವಸ್ಥಳವಾದ ಯಾವಾಲ್‌ನಲ್ಲಿಯ ಅವರ ವ್ಯವಸಾಯ ಭೂಮಿಯನ್ನು ಆಕ್ರಮಿಸುವದಾಗಿ ಈ ಸಂಬಂಧವ ಸಂಘ ಅವರಿಗೆ ಮನವಿಪತ್ರ ಅರ್ಪಿಸಿದೆ— ಚಳವಳ ಯಾವಾಗ ಸ್ವಾರಂಭಿಸಲಾಗುವುದೆಂಬುದನ್ನು ತಿಳಿಸಿಲ್ಲ.

○

ಪಕ್ಷಗಳ ಐಕ್ಯತೆಯೆ

ಬೆಂಗಳೂರು— ಹೊಸ ಕಾಂಗ್ರೆಸ್ಸಿನೊಡನೆ ಜನತಾ ಪಕ್ಷ ಐಕ್ಯಗೊಳ್ಳುವ ಸಂಭವವಿದೆ ಎಂದು ಹೇಳಲಾಗಿದೆ.

ರಾಜೀನಾಮೆ ಇಲ್ಲ

ಬೆಂಗಳೂರು — ಕಾಂಗೆಸ್ಸಿನ ಅಹಮದಾಬಾದು ಅಧಿವೇಶನಾನಂತರ ತಾವು ರಾಜೀನಾಮೆ ಕೊಡುವ ವಿಷಯವಿಲ್ಲವೆಂದು ಶ್ರೀ ನಿಜಲಿಂಗಪ್ಪನವರು ಹೇಳಿದರು.

★

ಇಂದಿರಾರಲ್ಲಿ ವಿನಂತಿ

ಬೆಂಗಳೂರು— ರಾಜ್ಯದಲ್ಲಿರುವ ಅಸಮಾನತೆಯನ್ನು ಸರಿಪಡಿಸಲು ತಮಗೆ ಸಹಾಯ ಮಾಡಬೇಕೆಂದು, ಆಡಳಿತ ಸುಧಾರಣಾ ಕಮಿಷನ್ನಿನ ಅಧ್ಯಕ್ಷರೂ, ರಾಜ್ಯದ ಪ್ರಮುಖ ನಾಯಕರೊಬ್ಬರೂ ಆದ ಶ್ರೀ ಹನುಮಂತಯ್ಯನವರು ಪ್ರಧಾನಿ ಇಂದಿರಾರವರಲ್ಲಿ ವಿನಂತಿಸಿದರು.

ಗಂಡಸು ಹೆಂಗಸಾದ

ರೋಂ— ಇಲ್ಲಿಯ ಪುರುಷರ ಜೈಲಿನಲ್ಲಿ ಒಬ್ಬ ಪುರುಷನು ಸ್ತ್ರೀಯಾಗಿ ಪರಿವರ್ತಿತನಾಗಿದ್ದಾನೆ— ಅಲ್ಲಿಯ ಅಧಿಕಾರಿಗಳಿಗೆ ಏನು ಮಾಡಬೇಕೆಂಬುವ ಬಗ್ಗೆ ತಲೆನೋವು ಉಂಟಾಗಿದೆ

ಹೊಟೇಲ್ ಮಾಲೀಕ ಸಂಘದ ಅಧ್ಯಕ್ಷರ ಗಮನಕ್ಕೆ

○ ದಸರಾ ಕಾಲದಲ್ಲಿ ತಿಂಡಿ ಪದಾರ್ಥಗಳ ಬೆಲೆ ಏರಿಕೆ ಮಾಡಿದ ಹೊಟೇಲಿನವರು ಬೆಲೆ ಇಳಿಸಿಲ್ಲ. ಆ ಏರಿಕೆ ಇಳಿಸುವಂತೆ ಸೂಚಿಸಿ.

○ ಸಾದಾ ದೋಸೆ ಸಾಂಬಾರ್‌ಗೆ. ಸಾಂಬಾರ್‌ಗೆ, ಅರ್ಧ ಸೌಟೂ ಇರುವುದಿಲ್ಲ, ಅದಕ್ಕೆ 5 ಪೈಸೆ ತೆಗೆದುಕೊಳ್ಳುವ ಹೋಟೆಲುಗಳಿಗೆ ಹಾಗೆ ಮಾಡದಂತೆ ಸೂಚಿಸಿ.

ಆಹಾರ ಸ್ವಾವಲಂಬನೆಗೆ

ಬೆಂಗಳೂರು—ದೇಶದಲ್ಲಿ ಆಹಾರ ಸ್ವಾವಲಂಬನೆಯಾಗಲು ಪ್ರತಿ ಗ್ರಾಮದಲ್ಲೂ ವ್ಯವಸಾಯ ಸಲಹಾ ಸೇವೆ ಅವಶ್ಯಕವೆಂದು ಗೌರ್ನರ್—ಶ್ರೀ ಧರ್ಮವೀರ್‌ರವರೂ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ರವರೂ ಸೆಮಿನಾರ್‌ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

●

ಇಂದಿರಾರವರ ಶುಭೇಚ್ಛೆ

ಕಾನ್ಪುರ— ದೊಡ್ಡ ಕೈಗಾರಿಕೆಗಳು ಬೆಳೆಯುವ ಬಗ್ಗೆ ನನ್ನದೇನೂ ವಿರೋಧವಿಲ್ಲ ; ಆದರೆ ಗ್ರಾಮಾಂತರಗಳಲ್ಲಿ ಜನರ ಜೀವನ ಮಟ್ಟ ಹೆಚ್ಚಿಸಲು ಅಲ್ಲಿ ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿ ಆಸ್ಪೇ ಮುಖ್ಯವಾಗಿರುವದೆಂದು ಹೇಳಿದರು. ನಾವು ನಿಜವಾದ ಭಾರತವಾದ ಗ್ರಾಮಾಂತರ ಭಾಗಗಳ ಬಗ್ಗೆ ಗಮನಕೊಡುವವರೆಗೆ ಭಾರತದ ಸಮಸ್ಯೆಗಳು ಮುಂದುವರಿಯುತ್ತಿರುತ್ತವೆ, ಎಂದೂ ಹೇಳಿದರು.

★

ವರ್ಣಚಿತ್ರಕ್ಕೆ ಅಪಾರ ಬೆಲೆ

ಲಂಡನ್— 40 ವರ್ಷಗಳ ಹಿಂದೆ ಬ್ರಿಟಿಷ್ ಜನರಿಗೆ 7000 ಸ್ಟರ್ಲಿಂಗ್‌ಗೆ ದೊರೆತ ರೆಂಬ್ರಾಂಟ್ ವರ್ಣಚಿತ್ರಕ್ಕೆ ಕ್ರಿಸ್ಟಿ ಹರಾಜು ಅಂಗಡಿಯಲ್ಲಿ ಹರಾಜಿನಲ್ಲಿ 315000 ಸ್ಟರ್ಲಿಂಗ್ ದೊರೆಯಿತು.

★

ಸಾಹಿತ್ಯ ಅಕಾಡಮಿ ಅವಾರ್ಡ್

ಬೆಂಗಳೂರು— 1967 ರಲ್ಲಿನ ಕಾದಂಬರಿಗಳಲ್ಲಿ ಸಾಹಿತ್ಯ ಅಕಾಡಮಿಯ ಪ್ರಥಮ ಬಹುಮಾನವು ಭಾರತೀಸುತರ ' ಗಿರಿಕನ್ನಿಕೆ ' ಗೂ, ದ್ವಿತೀಯ ಬಹುಮಾನವು ಶ್ರೀ ಶ್ರೀನಿವಾಸ ಉಡುಪರ ' ಓಲಿದು ಬಂದವಳು " ಗೂ ದೊರೆತಿದೆ.

ಭ್ರಷ್ಟಾಚಾರ ವಿರುದ್ಧ ತೀವ್ರಕ್ರಮ

ರಾವಲ್ಪಿಂಡಿ— ಭ್ರಷ್ಟಾಚಾರ, ದುರ್ನಡತೆ, ಅಧಿಕಾರ ದುರುಪಯೋಗದ ಆಪಾದನೆಗಾಗಿ ಪೂರ್ವ ಮತ್ತು ಪಶ್ಚಿಮ ಪಾಕಿಸ್ಥಾನದಲ್ಲಿ 300 ಮಂದಿ ಉನ್ನತಮಟ್ಟದ ಸರಕಾರಿ ಅಧಿಕಾರಿಗಳು ಸಸ್ಪೆಂಡು ಮಾಡಲ್ಪಟ್ಟರು.

★

ಅಖಿಲ ಭಾರತ ರಾಜಕೀಯ ಪಕ್ಷಗಳು

ಮಧುರೈ— ದೇಶದಲ್ಲಿ ಅಖಿಲ ಭಾರತ ರಾಜಕೀಯ ಪಕ್ಷಗಳಿಗೆ ಭವಿಷ್ಯವಿಲ್ಲವೆಂದೂ, ದೇಶದ ಭವಿಷ್ಯವು ಪ್ರಾದೇಶಿಕ ರಾಜಕೀಯ ಪಕ್ಷಗಳ ಮೇಲೆ ನಿಂತಿದೆಯೆಂದೂ ಡಿ ಎಂ ಕೆ ಮುಖ್ಯ ಮಂತ್ರಿ ಶ್ರೀ ಕರುಣಾನಿಧಿ ಹೇಳಿದರು.

○

ಸರಕಾರಿ ಜಾಹಿರಾತು

ನವದೆಹಲಿ— ಸರಕಾರ ಪತ್ರಿಕೆಗಳಿಗೆ ಜಾಹಿರಾತಿಗಾಗಿ ರೂ. 1 ಕೋಟಿ ಮಾತ್ರ ಖರ್ಚು ಮಾಡುತ್ತಿದೆಯೇದೂ, ಆದರೆ ವಿಭಾಗದವರು ರೂ 30 ಕೋಟಿ ಖರ್ಚು ಮಾಡುತ್ತಿರುವರೆಂದೂ ರಾಜ್ಯ ಸಭೆಯಲ್ಲಿ ತಿಳಿಸಲಾಯಿತು — ಚಿಕ್ಕ ಪತ್ರಿಕೆಗಳಿಗೆ ಸರಕಾರ ಹೆಚ್ಚೆಚ್ಚು ಜಾಹಿರಾತು ಕೊಡಲು ಪ್ರಯತ್ನಿಸುತ್ತಿರುವುದೆಂದೂ ತಿಳಿಸಲಾಯಿತು.

★

ಯುದ್ಧ ವಿರಾಮ ಇಲ್ಲ

ವಾಷಿಂಗ್ಟನ್— ವಿಯಟ್ನಾಂದಲ್ಲಿ ಯುದ್ಧ ವಿರಾಮವಿಲ್ಲವೆಂದು ಹೇಳಲಾಗಿದೆ.

●

ವಿಶ್ವದಲ್ಲಿ ಪ್ರಥಮ ಸ್ಥಾನ

ರೋಂ— ವಿಶ್ವದಲ್ಲೇ 1969 ರಲ್ಲಿ ಅತ್ಯುತ್ತಮ ' ಕ್ಲೌನ್ ' ಆಗಿ ರಷ್ಯಾದ ಅಂಡ್ರೆ ಆಯ್ಕೆಯಾದರು.

ಕಪೆಗಳನು ಕೊಲ್ಲಬೇಡಿ

ಬೊಂಬಾಯಿನ ಪ್ರಾಕೃತಿಕ ಐತಿಹಾಸಿಕ ಸಂಘದ ಸದಸ್ಯ ಶ್ರೀ ಹುಮಾಯ್ಯು ಅಬ್ದುಲ್ ಆಲಿಯವರು ಈಚೆಗೆ ಮಹಾರಾಷ್ಟ್ರ ಮುಖ್ಯ ಮಂತ್ರಿಯವರಲ್ಲಿ, ಕೊಲಾಬ ಜಿಲ್ಲೆ ಕರ್ಜಾತ್ ತಾಲ್ಲೂಕಿನಲ್ಲಿ ಕಪ್ಪೆ ಹಿಡಿಯುವುದು ನಿಲ್ಲಿಸಬೇಕೆಂದು ವಿನಂತಿಸಿದರು. 1962 ರಲ್ಲಿ ಕಪ್ಪೆ ಹಿಡಿಯುವದು ಪ್ರಾರಂಭವಾದ ನಂತರ ತಾಲ್ಲೂಕಿನಲ್ಲಿ ಬೆಳೆ ತಿನ್ನುವ ಕ್ರಿಮಿಗಳು ಬೆಳೆಯನ್ನು ನಷ್ಟಪಡಿಸುತ್ತಿದೆಯೆಂದೂ, ಕ್ರಿಮಿಗಳಿಂದ ಈ ವರ್ಷದ ಭತ್ತದ ಬೆಳೆ ಹಾಳಾಗಿದೆಯೆಂದೂ ಕಪ್ಪೆಗಳನ್ನು ರಫ್ತು ಮಾಡದಿದ್ದರೆ ಹೀಗಾಗುತ್ತಿರಲಿಲ್ಲವೆಂದೂ ತಿಳಿಸಿದರು

ಪಾರ್ಲಿಮೆಂಟಿನಲ್ಲಿ ತಟಸ್ಥ ಪಕ್ಷ

ಪಾರ್ಲಿಮೆಂಟಿನಲ್ಲಿ ಕಾಂಗ್ರೆಸಿಗರ ತಟಸ್ಥ ಪಕ್ಷ ಒಂದು ಸ್ಥಾಪನೆ ಆಗಿರುವುದಾಗಿ ನವ ದೆಹಲಿ ವಾರ್ತೆ.

ಕನಿಷ್ಠ ಉತ್ಪಾದನೆ

ಹಶುವಿನ ವಿಜ್ಞಾನದ ಶ್ವೇತಭವನ ಸಮ್ಮೇಳನದಲ್ಲಿ ನಾಲ್ಕು ಮುಂದಿಯ ಅಮೆರಿಕನ್ ಗುಣಗಾರಕ್ಕೆ ಕನಿಷ್ಠ ಏನೂನವೆ ಸಾವಿರ ಡಾಲರ್ ಉತ್ಪತ್ತಿ ಇರಬೇಕೆಂದು ನಿರ್ಧರಿಸಲಾಗಿದೆ. ಹಶುವಿನಿಂದ ನರಳುತ್ತಿರುವ ೫ ಮಿಲಿಯ ಅಪೇಕ್ಷಕನ್ನರಿಗೆ ಈ ಡಲೇ ಪರಿಹಾರ ದೊರೆಯಬೇಕೆಂದು ಅಧ್ಯಕ್ಷ ನಿಕ್ಸ್ನ್ ವಾಷಿಂಗ್ಟನ್ನಿನಲ್ಲಿ ತಿಳಿಸಿದರು.


1934
ಅವನಿಗಾಗ
23 ವರ್ಷ ವಯಸ್ಸು
ಸಂತುಷ್ಟ ನಿವೃತ್ತಿ ಜೀವನಕ್ಕಾಗಿ ಆತನು ಒಂದು ಸುಭದ್ರ ವಿಧಾನವನ್ನು ಆರಿಸಿದ
ಜೀವನೋಪಾಯವನ್ನು ಅದಾಗಲೇ ಪ್ರಾರಂಭಿಸಿದ್ದ
ತನ್ನ ಹಾಗೂ ತನ್ನ ಭವಿಷ್ಯದ ಬಗ್ಗೆ ಆತನಿಗೆ
ಸಹಜ ಆತ್ಮವಿಶ್ವಾಸ. ಮುಂದೆ ಎದುರಿಸಲೇ ಬೇಕಾ
ಗಿರುವಂತಹ ಖರ್ಚುಗಳಿಗಾಗಿ ಆತನು ಉಳಿತಾಯದ
ಯೋಜನೆಯನ್ನು ಮಾಡಿದನು—ಮಕ್ಕಳ
ವಿದ್ಯಾಭ್ಯಾಸದ ವೆಚ್ಚಗಳಿಗಾಗಿ...
ಮಗಳ ವಿವಾಹದ ಖರ್ಚುಗಳಿಗಾಗಿ....
ಮತ್ತು ವೃದ್ಧಾಪ್ಯದಲ್ಲಿ ಸಂತುಷ್ಟ ನಿವೃತ್ತಿ ಜೀವನಕ್ಕಾಗಿ.
ಹೌದು ಆತನು ಜೀವ ವಿಮೆಯಲ್ಲಿ ಉಳಿತಾಯವನ್ನು
ಮಾಡಿದನು ತಾನಿನ್ನೂ ವಿದ್ಯಾರ್ಥಿಯಾಗಿದ್ದಾಗ ತನ್ನ ಮಡದಿ ಮಕ್ಕಳಿಗೆ
ಹಣಕಾಸಿನ ಬಗ್ಗೆ ಎಲ್ಲಾ ವಿಧಗಳಲ್ಲಿ ಭದ್ರತೆ ಕೊಡಲು ಜೀವ ವಿಮೆಗೆ ಮಾತ್ರ
ಸಾಧ್ಯವೆಂದು ಅವನಿಗೆ ತಿಳಿದಿತ್ತು.
ಜೀವ ವಿಮೆ ಒಂದು ಅದ್ವಿತೀಯ
ಭದ್ರತೆ. ನಿಮಗೂ ಒಂದು ಸಂತುಷ್ಟ ನಿವೃತ್ತಿ ಜೀವನಕ್ಕೆ ಅವಶ್ಯಕವಾದೆಯೇ? ಅಥವಾ ವೃದ್ಧಾಪ್ಯದಲ್ಲಿ ಕಷ್ಟದಿಂದ
ದಿನಗಳನ್ನು ದೂಡುವಿರೊ? ತಾಡುತ್ತಿರುವ ಈ ಯೋಜನೆಯನ್ನು ಇಂದೇ ತೊಲಗಿಸಿರಿ ವಿಮೆ ಮಾಡಿಸಿದಂತ
ರಾಗಿರಿ. ನಿಮ್ಮ ಎಲ್.ಐ.ಸಿ. ಏಜಂಟನನ್ನು ಈ ದಿನವೇ ಕಾಣಿರಿ ನಿಮಗೆ ಮತ್ತು ನಿಮ್ಮವರಿಗೆ
ಭದ್ರತೆಯನ್ನು ಒದಗಿಸುವ ಒಂದು ಅಥವಾ ಅಧಿಕ ಪಾಲಿಸಿಗಳನ್ನು ಆರಿಸಲು ಆತನು ಸಹಕರಿಸುವನು
ಜೀವ ವಿಮೆಗಿಂತ
ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ವುಡ್‌ಲಾಂಡ್ ತಾ.5—12—69 ರಿಂದ
ಶಿ ಸ್ ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಚಿರಾಗ್ ★ CHIRAG

ತಾರಾಗಣ— ಸುನೀಲ್‌ದತ್, ಆಶಾಪರಾಖ್, ಲಲಿತಾಪವಾರ್, ಓಂಪ್ರಕಾಶ್
ನಿರ್ದೇಶನ : ರಾಜ್ ಖೋಸ್ಲ ಸಂಗೀತ : ಮದನ್ ಮೋಹನ್
[ಇನ್ನು 3 ದಿವಸಗಳು]

ಆಪೆದಾ— ಜಯಪ್ರದ 3 ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....

ದೈವಮಗನ್

ಪಾತ್ರ : ಶಿವಾಜಿ ಗಣೇಶನ್, ನಾಗೇಶ್, ಜಯಲಲಿತ
ದಿನ 3 ಆಟಗಳು

Help The Gorakshana



ಗೋರಕ್ಷಣೆ ತಮ್ಮ, ಪ್ರಾಣದಯಾ ಕಾರ್ಯಗಳು ಹೆಚ್ಚಿಸಿ ನಡೆಯೋ
ಗೋರಕ್ಷಣೆಗೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajpet, Mysore